## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.631/2025**

| | | |
|---|---|---|
| ಸಾಕ್ಷಿದಾರರ ಹೆಸರು | ಯೊಗೇಶ್ | ಸಿ.ಡಬ್ಲ್ಯು-2 |
| ತಂದೆಯ ಹೆಸರು | ಗೋವಿಂದಪ್ಪ | ಪಿ .ಡಬ್ಲ್ಯೂ-2 |
| ವಯಸ್ಸು | 28 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಫ್ಲವರ್ ಡೆಕೋರೇಟರ್ | ದಿನಾಂಕಃ |
| ವಾಸಃ | ಸಾಗರ | 24.03.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ಮತ್ತು ಚಾ.ಸಾ 3 ನನ್ನ ತಂದೆ ತಾಯಿ. ಚಾ.ಸಾ 4 ರಿಂದ 7 ಗೊತ್ತು. ಆರೋಪಿತರು ನನಗೆ ಗೊತ್ತು.

**2.** ಆರೋಪಿತರು ಇವೆಂಟ್ ಮ್ಯಾನೆಂಜ್ ಮೆಂಟ್ ಕಂಪನಿಯನ್ನು ನಡೆಸುತ್ತಿದ್ದು, ಅವರು ನನಗೆ ಡೆಕೋರೇಶನ್ ಅನ್ನು ವಹಿಸಿಕೊಡುತ್ತಿದ್ದರು. 3 ವರ್ಷಗಳಿಂದ ನಾನು ಅವರ ಬಳಿ ಕೆಲಸ ಮಾಡುತ್ತಿದ್ದೆ. ಒಂದು ಇವೆಂಟ್ ಗೆ ಸಂಬಂಧಿಸಿದಂತೆ 2.5 ಲಕ್ಷಕ್ಕೆ ಕರಾರನ್ನು ಮಾಡಿಕೊಂಡು ಆ ಪೈಕಿ 90 ಸಾವಿರ ರೂ.ಗಳನ್ನು ನನಗೆ ಆರೋಪಿತರು ಪಾವತಿಸಿ 1,60,000/- ರೂ.ಗಳನ್ನು ಬಾಕಿ ಉಳಿಸಿಕೊಂಡಿದ್ದರು. ಆ ಹಣವನ್ನು ಕೊಡುವುದಾಗಿ ಹೇಳಿಕೊಂಡು ಬಂದು ನಂತರ ಯಾವುದೇ ಹಣ ಕೊಡುವುದಿಲ್ಲ ಎನ್ನುವುದಾಗಿ ನನ್ನ ಮೇಲೆ ಆರೋಪಿತರು ಗಲಾಟೆ ಮಾಡಿದ್ದರು.

**3.** ಸದರಿ ವಿಚಾರವಾಗಿ ಆರೋಪಿತರು ದಿನಾಂಕ 23.02.2025 ರಂದು ಬೆಳಿಗ್ಗೆ 09.45 ರ ಸುಮಾರಿಗೆ ಆರೋಪಿತರು ನಮ್ಮ ಮನೆಗೆ ಬಂದರು. ನನಗೆ ಹಾಗೂ ಚಾ.ಸಾ 1 ಮತ್ತು ಚಾ.ಸಾ 3 ರವರಿಗೆ ಆರೋಪಿತರು ಬೋಳಿಮಗನೇ, ಬೆವರ್ಸಿ ಎಂದು ಅವಾಚ್ಯವಾಗಿ ಬೈದ್ದುರು. ಆರೋಪಿತರು ನಮಗೆ ಬೈಯ್ಯುತ್ತಾ ತಳ್ಳಾಡಲು ಪ್ರಾರಂಭಿಸಿದರು. ಬಲವಾಗಿ 2 ನೇ ಆರೋಪಿತನು ತಳ್ಳಿದ್ದರಿಂದ ಚಾ.ಸಾ 1 ರವರು ಕೆಳಗೆ ಬಿದ್ದರು. 1 ನೇ ಆರೋಪಿತನು ನನ್ನ ಕೊರಳ ಪಟ್ಟಿ ಹಿಡಿದು ನನ್ನನ್ನು ತಳ್ಳಿ, ನನ್ನ ಕೆನ್ನೆಗೆ ಹೊಡೆದನು. 3 ನೇ ಆರೋಪಿತನು ತಳ್ಳಾಡಿದ್ದನ್ನು ಹೊರತು ಪಡಿಸಿ ಯಾರಿಗೂ ಹಲ್ಲೆ ಮಾಡಲಿಲ್ಲ. 1 ಮತ್ತು 2 ನೇ ಆರೋಪಿತರು ಚಾ.ಸಾ 3 ರವರನ್ನು ತಳ್ಳಿ ದೂಡಿದರು. ಚಾ.ಸಾ 7

ಮತ್ತು ಇನ್ನೊಬ್ಬರು ಗಲಾಟೆಯನ್ನು ಬಿಡಿಸಿದರು. ನಂತರ ತಳ್ಳಾಡುತ್ತಾ ಮನೆಯಿಂದ ಹೊರಗೆ ಬಂದಾಗ ಚಾ.ಸಾ 6 ಮತ್ತು 7 ರವರು ಜಗಳ ಬಿಡಿಸಿದರು.

**4.** ನಾವು ದೂರನ್ನು ನೀಡಲು ಪೋಲೀಸ್ ಠಾಣೆಗೆ ಹೋದಾಗ ಚಾ.ಸಾ 1 ರವರಿಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಮೊದಲು ಆಸ್ಪತ್ರೆಗೆ ಹೋಗುವಂತೆ ಪೋಲಿಸರು ತಿಳಿಸಿ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿದರು. ದಿನಾಂಕ 24.02.2025 ರಂದು ನಾವು ಪೋಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ನೀಡಿದೆವು. ದೂರು ಕೊಟ್ಟ ನಂತರ ದಿನಾಂಕ 27.02.2025 ರಂದು ಪೋಲಿಸರು ಸ್ಥಳಕ್ಕೆ ಪಂಚನಾಮೆ ಮಾಡಿ, ಫೋಟೋ ತೆಗೆದಿರುತ್ತಾರೆ. ಆ ಸಂದರ್ಭದಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿದ್ದು, ಅವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

**5.** 3 ನೇ ಆರೋಪಿತನು ಗಲಾಟೆಯಲ್ಲಿ ಅವಾಚ್ಯವಾಗಿ ಬೈದ್ದು ನನ್ನ ಕೆನ್ನೆಗೆ ಕೈಯಿಂದ ಹೊಡೆದನು ಎಂದರೆ ಸರಿ. ಜಗಳ ಬಿಡಿಸಲು ಬಂದ ಚಾ.ಸಾ 3 ರವರಿಗೆ 1 ನೇ ಆರೋಪಿತನು ಕಾಲಿನಿಂದ ಒದ್ದನು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ. ಎಸ್.ಜಿ.ಪಿ ರವರಿಂದಃ–</u>**

**1.** 2020 ರಿಂದ ನಾನು ಫ್ಲವರ್ ಡೆಕೋರೇಟರ್ ಎಂದು ಕೆಲಸ ಮಾಡುತ್ತಿದ್ದೇನೆ. ಆರೋಪಿತರು 10 ವರ್ಷಗಳಿಂದ ಇವೆಂಟ್ ಪ್ಲಾನ್ ಕಂಪನಿ ನಡೆಸುತ್ತಿದ್ದಾರೆ ಎಂದರೆ ಸರಿ. ಆರೋಪಿತರು ಪ್ರತೀ ವರ್ಷ 40–50 ಕಾರ್ಯಕ್ರಮಗಳಲ್ಲಿ ಇವೆಂಟ್ಸ್ ಪ್ಲಾನ್ ಅನ್ನು ನಡೆಸುತ್ತಾರೆ ಎಂದರೆ ಸರಿ. ನನ್ನ ಮತ್ತು ಆರೋಪಿತರ ನಡುವೆ ಎಷ್ಟು ಹಣದ ಸಲುವಾಗಿ ಮನಸ್ತಾಪ ಇತ್ತು ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಆರೋಪಿತರು ನಮ್ಮ ಮನೆಗೆ ಕಾರಿನಲ್ಲಿ ಬಂದಿದ್ದರು. ಸದರಿ ಕಾರಿನ ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಆರೋಪಿತರು ಜಗಳ ಮಾಡಲು ಪ್ರಾರಂಭಿಸಿದ ಕೂಡಲೇ ನಾನು ಫೋಟೋ ಅಥವಾ ವಿಡೀಯೋ ಮಾಡಲು ಪ್ರಯತ್ನ ಮಾಡಿಲ್ಲ ಹಾಗೂ ಪೋಲಿಸರಿಗೆ ಕರೆ ಮಾಡಿ ಮಾಹಿತಿಯನ್ನು ತಿಳಿಸಿಲ್ಲ. ಘಟನೆಯಲ್ಲಿ ಯಾರು ಯಾರಿಗೆ ಏನು ಮಾಡಿದರು ಮತ್ತು ಬೈದ್ದುರು

ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರಿಗೆ ನಾನು ಮೋಸ ಮಾಡಿದ್ದು, ಆನಂತರ ಅವರ ಮೇಲೆ ಹಲ್ಲೆ ಮಾಡಿರುವುದಾಗಿ ಆಪಾಧಿಸಿ ನನ್ನ ಹಾಗೂ ಚಾ.ಸಾ 1 ಮತ್ತು 3 ರವರ ವಿರುದ್ಧ ಪ್ರತಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಘಟನೆ ಕಾಲಕ್ಕೆ ಸುಮಾರು 8-10 ಜನರು ಸೇರಿದ್ದರು. ಘಟನೆ ನಡೆದ ದಿನ ನಾನು ಠಾಣೆಯಲ್ಲಿ ದೂರು ದಾಖಲಿಸಿಲ್ಲ ಎಂದರೆ ಸರಿ. ಮುಂದುವರೆದು ಆ ದಿನವೇ ನಾವು ಹೋದಾಗ ಪೋಲಿಸರು ಮೊದಲು ಆಸ್ಪತ್ರೆಗೆ ಹೋಗುವಂತೆ ನಮಗೆ ತಿಳಿಸಿದರು ಎನ್ನುತ್ತಾರೆ. ನಮ್ಮ ಮನೆಯಿಂದ ಪೋಲಿಸ್ ಠಾಣೆ ಸುಮಾರು ಅರ್ಧ ಕಿ.ಮೀ ದೂರ ಇದೆ. ನನ್ನ ಮತ್ತು ಆರೋಪಿತರ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲಿಸಿರುವುದರಿಂದ ಸದರಿ ಪ್ರಕರಣದಿಂದ ತಪ್ಪಿಸಿಕೊಳ್ಳಲು ಈ ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

**2.** ಈ ಪ್ರಕರಣದ ಸಂಬಂಧ 2-3 ಬಾರಿ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ. ಆದರೆ ದಿನಾಂಕ ನನಗೆ ನೆನಪಿಲ್ಲ. ಆರೋಪಿತರು ಯಾವತ್ತೂ ನಮ್ಮ ಮನೆಗೆ ಬಂದು ಗಲಾಟೆ ಮಾಡಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.